ಈ ಬರಹವನ್ನು ಪೂರ್ಣಚಂದ್ರ ತೇಜಸ್ವಿಯವರೊಂದಿಗೆ ನನ್ನ ಪತಿ ಬಿ.ಎನ್. ಶ್ರೀರಾಮ ಮತ್ತು ನಾನು ಒಡನಾಡಿಗಳಾಗಿ ಕಳೆದ ದಿನಗಳ ಅನೇಕ ನೆನಪುಗಳ ಕೊಲಾಜ್ ಎಂದು ಭಾವಿಸಬೇಕು. ನೆನಪುಗಳು ಮನದಾಳದಿಂದ ಮೂಡಿಬಂದಂತೆ ನಿರೂಪಿಸುತ್ತ ಹೋಗುವುದರಿಂದ ಇದು ರೂಢಿಗತವಾದ ಸಿದ್ಧ ಮಾದರಿಗೆ ಹೊರತಾದ ಬರಹವಾಗಿದೆ.

ಐವತ್ತರ ದಶಕದಲ್ಲಿ ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ತೇಜಸ್ವಿಯವರ 'ಲಿಂಗ ಬಂದ' ಕತೆಗೆ 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯ ಪ್ರಥಮ ಬಹುಮಾನ ಬಂದಿತು. ಆಗ ಇವರು ಕುವೆಂಪು ಅವರ ಮಗ ಎಂದು ತಿಳಿಯಿತು. ಮುಂದೆ ಅನೇಕ ವರ್ಷಗಳ ನಂತರ ನಾನು ತೇಜಸ್ವಿಯವರ ನೆಚ್ಚಿನ ಗೆಳೆಯ ಶ್ರೀರಾಮರನ್ನು ಮದುವೆ ಆದ ಮೇಲೆ ನಾವು ಸ್ನೇಹಿತರು ತೇಜಸ್ವಿಯವರೊಡನೆ ಕಳೆದ ಸುಮಾರು 40 ವರ್ಷಗಳ ಅನೇಕ ಘಟನೆಗಳ ಸರಮಾಲೆ ಈ ನೆನಪು. ಹಾಗೆಯೇ ಇದು ನಮ್ಮ ಸ್ನೇಹದ ಸುವರ್ಣ ಯುಗ. ಹೀಗೆ ಹಲವು ದಶಕಗಳು ತಣ್ಣಗೆ ಮಳೆ ಬಂದಂತೆ, ಚಳಿಗಾಳಿ ಬೀಸಿ, ಬಿಸಿಲು ಜಳಪಿಸಿದಂತೆ ಸ್ನೇಹದ ಕಾಲ ಸದ್ದಿಲ್ಲದೆ ಕರಗಿ ಹೋಗಿದ್ದು ತಿಳಿಯಲೇ ಇಲ್ಲ.

ಎಲ್ಲಕ್ಕಿಂತ ಮುಂಚೆ ತೇಜಸ್ವಿ ಮತ್ತು ಶ್ರೀರಾಮರ ಸ್ನೇಹ ಕೂಡಿ ಬಂದದ್ದರ ಬಗ್ಗೆ ಹೇಳಬೇಕು. ಮೈಸೂರಿಗೆ ಬಿ.ಎ. ವಿದ್ಯಾರ್ಥಿಯಾಗಿ ಬಂದ ಶ್ರೀರಾಮ್‌ಗೆ ಅವರ ಸಹಪಾಠಿ ಶ್ರೀವಗಳೆ ಶ್ರೀನಿವಾಸ್ ಮತ್ತು ಎನ್.ಡಿ. ಸುಂದರೇಶ್‌ರ ಮೂಲಕ ತೇಜಸ್ವಿಯವರ ಪರಿಚಯವಾಯ್ತು. ಪ್ರಚಲಿತ ವಿದ್ಯಮಾನ, ರಾಜಕೀಯ, ಸಾಹಿತ್ಯ ಹೀಗೆ ಅನೇಕ ವಿಷಯಗಳನ್ನು ಚುರುಕಾಗಿ, ಅಥೆಂಟಿಕ್ ಆಗಿ ವಿಶ್ಲೇಷಿಸುತ್ತಿದ್ದ ಶ್ರೀರಾಮರತ್ತ ತೇಜಸ್ವಿ ಆಕರ್ಷಿತರಾದರು. ಸ್ನೇಹ ಬೆಳೆದು ಕೊನೆಗೆ ವಿಮರ್ಶಕ ಜಿ.ಎಚ್. ನಾಯಕರ ಮಾತಿನಲ್ಲಿ ಹೇಳುವುದಾದರೆ ಶ್ರೀರಾಮ್ ತೇಜಸ್ವಿಯವರ ಆತ್ಮಸಖನಾದರು ಮತ್ತು ತೇಜಸ್ವಿ, ಶಾಮಣ್ಣ, ಶ್ರೀರಾಮ, ಸುಂದರೇಶ್, ರಾಮದಾಸ್ ಇವರ ಒಂದು ಸ್ನೇಹಲೋಕ ಸೃಷ್ಟಿಯಾಯಿತು.

60ರ ದಶಕದಲ್ಲಿ ಮೊಬೈಲ್, ಇಂಟರ್ನೆಟ್ ಇತ್ಯಾದಿ ಕೇಳಿ ಅರಿಯೆವು. ಫೋನ್ ಇದ್ದರೂ ಎಲ್ಲೋ ಕೆಲವರ ಮನೆಯಲ್ಲಿತ್ತು. ಪತ್ರ ವ್ಯವಹಾರವೇ ಮುಖ್ಯ ಸಂಪರ್ಕ ಸಾಧನ. ಈ ಗುಂಪಿನಲ್ಲಿ ಒಬ್ಬರು ಕಾಗದ ಬರೆದರೂ ಸಾಕು, ಉಳಿದ ಸ್ನೇಹಿತರೆಲ್ಲಾ ಹಾಜರ್. ಹೇಳಿದಾಗ ಬರದಿದ್ದರೆ ಏನು ಕಾದಿದೆ ಗೊತ್ತೊ? ಎಂಬ ಧಮಕಿ ಬೇರೆ ತೇಜಸ್ವಿಯವರಿಂದ! ಎಲ್ಲ ಸ್ನೇಹಿತರು ಮದುವೆಯಾದ ಮೇಲೆ ಗುಂಪು ಇಮ್ಮಡಿಯಾಯ್ತು. ಹಾಸ್ಯ, ತಮಾಷೆ, ಊಟ, ತಿಂಡಿ, ತುಂಟತನಗಳಿಗೆ ಮೇರೆಯೇ ಇರಲಿಲ್ಲ. ಅಂದಿನಿಂದ ತೇಜಸ್ವಿ ನಿಷ್ಕ್ರಮಣದವರೆಗೆ ನಾವು ಸ್ನೇಹಿತರು ಅವರೊಂದಿಗೆ ಕಳೆದ ಕೆಲವು ರಸಕ್ಷಣಗಳ ಬಗ್ಗೆ ಹೇಳಲು ಸಂತೋಷ, ದುಃಖ ಮಿಶ್ರವಾಗಿ ಬರುತ್ತಿವೆ.

ಅವರೊಡನೆ ಕಳೆದ ಸುದೀರ್ಘ ಕಾಲದಲ್ಲಿ ತೇಜಸ್ವಿಯವರ ವ್ಯಕ್ತಿತ್ವದ ಪರಿಚಯ ಸ್ವಲ್ಪ ಮಟ್ಟಿಗೆ ಆಯಿತು. ಸ್ವಲ್ಪಮಟ್ಟಿಗೆ ಎಂದು ಏಕೆ ಹೇಳಿದೆನೆಂದರೆ, ಅವರದ್ದು ಹೀಗೇ ಎಂದು ಸುಲಭಕ್ಕೆ ಕಟ್ಟಿಕೊಡಲಾಗದ, ಕೆಲವು ವೇಳೆ ಅಸಂಗತ ಎನಿಸುವಷ್ಟು ಅದ್ಭುತ, ವಿಲಕ್ಷಣ ವ್ಯಕ್ತಿತ್ವ. ನಗುತ್ತಿದ್ದಾರೆ ಪರವಾಗಿಲ್ಲ ಎಂದುಕೊಂಡರೆ ಮರುಕ್ಷಣವೇ ಸಿಟ್ಟು, ಸಿಟ್ಟಾದರಲ್ಲ ಎಂದು ಎದುರಿಗಿದ್ದವರು ಬೆಪ್ಪಾದರೆ ಮರುಕ್ಷಣವೇ ನಕ್ಕು ಗೇಲಿ ಮಾಡಿ ವಾತಾವರಣವನ್ನು ತಿಳಿಗೊಳಿಸುವ ರೀತಿ 'ಕ್ಷಣ ಚಿತ್ತ ಕ್ಷಣ ಪಿತ್ತ'. ಇವರ ಎಲ್ಲ ಮೂಡುಗಳನ್ನು ತಿಳಿದಿದ್ದ ಶ್ರೀರಾಮ್ ನಮ್ಮ ಮದುವೆಯಾದ ಹೊಸತಿನಲ್ಲೇ, 'ನೋಡು, ತೇಜಸ್ವಿಯವರನ್ನು ಯಾವುದಕ್ಕೂ ಬಲವಂತಮಾಡಬಾರದು. ಅದರಲ್ಲೂ ಊಟ ತಿಂಡಿಗಳ ವಿಷಯದಲ್ಲಿ ಒತ್ತಾಯಿಸಲೇ ಕೂಡದು. ಅವರಿಗೆ ಬೇಕಾದ್ದನ್ನು ಅವರೇ ಕೇಳುತ್ತಾರೆ' ಎಂದು ತಾಕೀತು ಮಾಡಿದರು. ಈ ಮಾತನ್ನು ಅಕ್ಷರಶಃ ಪಾಲಿಸಿ ಒಂದು ಆರೋಗ್ಯಕರ ಅಂತರವನ್ನಿಟ್ಟುಕೊಂಡೇ ತೇಜಸ್ವಿ ದಂಪತಿಯೊಂದಿಗೆ ನಡೆದುಕೊಂಡು ನಾನು ಪಡೆದದ್ದು